3.	HFW 89 MME 82	Regarding grant of permission to Sri Siddaganga Education Society, Tumkur to start Medical College at Tumkur.
4.	HFW 96 MME 82	Requesting for sanction of Medical College to be run by the Sanghameswara Vidya Samithi at Shimoga.
5.	HFW 99 MME 82	Request for grant of permission for starting of a Medical College at Hubli by Al-Meezan Educational Association, Hubli.
6.	HFW 101 MME 82	Grant of Farmers Medical College at Nandikoor, Dakshina Kannada District.
7.	HFW 103 MME 82	Sanction of Medical College for Sirsi (N.K.) Request by Smt. Anasuya G, Sharma, MLA.
8.	HFW 126 MME 82	Permission for starting of Medical College at Raichur or Bidar.
9.	HFW 128 MME 82	Establishment of Medical College by the people belong to B. C. and Minority Communities.

1983-84

1.	HFW 24 MME 83	Regarding Grant of permission to Veera Soudha Trust to start a Medical and Dental College at Bangalore.

ಶ್ರೀ ಭೀಮಣ್ಣ ಖಂಡ್ರೆ ಮಾನ್ಯ ರಾಮಚಂದ್ರ ವೀರಪ್ಪ (ಹುಲ್‌ಸೂರ್) ಇವರ ಪರವಾಗಿ.—ಮಾನ್ಯ ಅಧ್ಯಕ್ಷರೆ, ಇದರಲ್ಲಿ ಇನ್ನೊಂದು ಕಾಲೇಜಿನ ಹೆಸರು ಬರಲಿಲ್ಲ. ನೀವು ಎಷ್ಟು ಸೀಟುಗಳನ್ನು ಪೆಚ್ಚಿಗೆ ಮಾಡಿದ್ದೀರಿ ಎಂಬುದನ್ನು ಕೂಡ ಹೇಳಬೇಕು.

ಒಬ್ಬ ಮಾನ್ಯ ಸದಸ್ಯರು.—ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಪ್ರಶ್ನೆ ಕೇಳುವ ವಿಧಾನವೆ ಇದು ?

ಶ್ರೀ ಎಂ. ಎಸ್. ಕೃಷ್ಣನ್.—ಮಾನ್ಯ ಅಧ್ಯಕ್ಷರೆ,.....

ಉಪಾಧ್ಯಕ್ಷರು.—ಸ್ವಾಮಿ, 175ನೇ ಪ್ರಶ್ನೆ ಮುಗಿದುಹೋಯಿತು. ಮಾನ್ಯ ಸದಸ್ಯರು ದಯವಿಟ್ಟು ಕುಳಿತುಕೊಳ್ಳಬೇಕು.

ಮೈಸೂರು ಜಿಲ್ಲೆಯ ಪಿ. ಹೆಚ್. ಯು. ಆಸ್ಪತ್ರೆಗಳಲ್ಲಿ ಇರುವ ವೈದ್ಯರ ಬಗ್ಗೆ

176. ಶ್ರೀ ಕಾಳಮರಿಗೌಡ (ಪಿರಿಯಪಟ್ಟಣ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಮೈಸೂರು ಜಿಲ್ಲೆಯಲ್ಲಿ ಎಷ್ಟು ಪಿ. ಹೆಚ್. ಯು. ಆಸ್ಪತ್ರೆಗಳಿವೆ ;

ಆ) ಎಷ್ಟು ಆಸ್ಪತ್ರೆಗಳಲ್ಲಿ ಡಾಕ್ಟರುಗಳಿದ್ದಾರೆ, ಎಷ್ಟರಲ್ಲಿ ಇಲ್ಲ;

ಇ) ಪಿರಿಯಾಪಟ್ಟಣ ತಾಲ್ಲೂಕಿನ ಎಷ್ಟು ಪಿ. ಹೆಚ್. ಯು ಮತ್ತು ಪಿ. ಹೆಚ್. ಸಿ. ಆಸ್ಪತ್ರೆಗಳಲ್ಲಿ ಡಾಕ್ಟರುಗಳಿಲ್ಲದಿರುವುದು ಕಾರಣವೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು) :—

ಅ) 84 ಆರೋಗ್ಯ ಘಟಕಗಳು ಇವೆ.

70ರಲ್ಲಿ ಇದ್ದಾರೆ, 14ರಲ್ಲಿ ಇಲ್ಲ.

ಆ) (i) ಪಿ. ಹೆಚ್. ಯು. ಆಸ್ಪತ್ರೆಗಳು...3ರಲ್ಲಿ ಇಲ್ಲ.

(ii) ಪಿ. ಹೆಚ್. ಸಿ....1 ಇಲ್ಲಿ ಇದ್ದಾರೆ.

ಇ) ಖಾಲಿ ಇರುವ ಜಾಗಗಳನ್ನು ತುಂಬಲು ಲೋಕ ಸೇವಾ ಆಯೋಗದಿಂದ ಆಯ್ಕೆಯಾದ ಡಾಕ್ಟರರ ಪಟ್ಟಿಯನ್ನು ಕಾಯಲಾಗಿದೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಮಾನ್ಯ ಅಧ್ಯಕ್ಷರೆ, ಮೈಸೂರು ಜಿಲ್ಲೆಯಲ್ಲಿ 84 ಪಿ. ಹೆಚ್.ಯು.

ಆಸ್ಪತ್ರೆಗಳಿದ್ದು ಅದರಲ್ಲಿ 70 ಆಸ್ಪತ್ರೆಗಳಲ್ಲಿ ವೈದ್ಯರು ಇದ್ದಾರೆ, 14 ಆಸ್ಪತ್ರೆಗಳಲ್ಲಿ ವೈದ್ಯರಿಲ್ಲವೆಂದು ಮಾನ್ಯ ಸಚಿವರು ಹೇಳಿದ್ದಾರೆ. ಈ 14 ಆಸ್ಪತ್ರೆಗಳು ಯಾವುವು ಮತ್ತು ಪಿರಿಯಾ ಪಟ್ಟಣ ತಾಲೂಕಿನಲ್ಲಿ 3 ಪಿ.ಹೆಚ್.ಯು.ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ ಮತ್ತು ಪಿ. ಹೆಚ್. ಸಿ. ಆಸ್ಪತ್ರೆಯಲ್ಲಿ ವೈದ್ಯರು ಇದ್ದಾರೆಂದು ತಿಳಿಸಿದ್ದೀರಿ. ಆದರೆ ಈ 3 ಆಸ್ಪತ್ರೆಗಳಲ್ಲಿ ವೈದ್ಯರನ್ನು ಏತಕ್ಕೆ ನೇಮಕ ಮಾಡಲಿಲ್ಲ? ಲೋಕಸೇವಾ ಆಯೋಗದವರು ವೈದ್ಯರನ್ನು ನೇಮಕ ಮಾಡುವುದು ನಿಧಾನವಾದರೆ ಸ್ಥಳೀಯ ಅಭ್ಯರ್ಥಿಗಳನ್ನು ನೀವೇ ಏತಕ್ಕೆ ತೆಗೆದುಕೊಂಡು ನೇಮಕ ಮಾಡಬಾರದು ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮೈಸೂರು ಜಿಲ್ಲೆಯಲ್ಲಿ ಖಾಲಿ ಇರತಕ್ಕ ವೈದ್ಯರ ಹುದ್ದೆಗಳನ್ನು ಆಷ್ಟು ಬೇಗ ತುಂಬಲು ಕ್ರಮ ತೆಗೆದುಕೊಳ್ಳಬೇಕೆಂದು ತೀರ್ಮಾನಿಸಿದ್ದೇವೆ. ಲೋಕ ಸೇವಾ ಆಯೋಗದವರೂ ಕೂಡ ಸೂಕ್ತ ಕ್ರಮ ತೆಗೆದುಕೊಂಡಿದ್ದಾರೆ. ಆದರೂ ನಾವು ಸಧ್ಯದಲ್ಲೇ ಲೋಕಲ್ ಕ್ಯಾಂಡಿಡೇಟ್ಸ್‌ನ್ನು ತೆಗೆದುಕೊಂಡು ಖಾಲಿ ಇರತಕ್ಕ ಜಾಗಗಳನ್ನು ಭರ್ತಿಮಾಡಲು ಕ್ರಮ ತೆಗೆದು ಕೊಂಡಿದ್ದೇವೆ. ಅದು ಪ್ರೊಸೆಸ್ ಆಗುತ್ತಿದೆ.

ಶ್ರೀ ಕೆ. ಹೆಚ್. ರಂಗನಾಥ್.—ರಾಜ್ಯದಲ್ಲಿ ಇಂತಿಷ್ಟು ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ ಎನ್ನುವ ಬಗ್ಗೆ ಸರ್ಕಾರಕ್ಕೆ ಏನಾದರೂ ದೂರುಗಳು ಬಂದಿವೆಯೆ? ಬಂದಿದ್ದರೆ ತಾವು ಏನು ಕ್ರಮವನ್ನು ತೆಗೆದುಕೊಂಡಿದ್ದೀರಿ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಪ್ರತ್ಯೇಕವಾದ ಪ್ರಶ್ನೆ ಕೇಳಿದರೆ ಹೇಳುತ್ತೇನೆ. ಈಗ ಇದಕ್ಕೆ ಸಂಬಂಧಪಟ್ಟ ಅಂಕಿಅಂಶಗಳಿಲ್ಲ. ಅನೇಕ ಕಡೆ ವೈದ್ಯರಿಲ್ಲ ಎನ್ನುವ ದೂರು ಸರ್ಕಾರದ ಗಮನದಲ್ಲಿದೆ. ಸ್ಥಳೀಯ ಅಭ್ಯರ್ಥಿಗಳನ್ನಾದರೂ ತೆಗೆದುಕೊಂಡು ಖಾಲಿ ಇರತಕ್ಕ ಸ್ಥಳಗಳನ್ನು ಭರ್ತಿ ಮಾಡಬೇಕೆಂದು ಕ್ರಮ ತೆಗೆದುಕೊಂಡಿದ್ದೇವೆ. ಇದನ್ನು ಮಾನ್ಯ ಮುಖ್ಯಮಂತ್ರಿಯವರೂ ಕೂಡ ಹೇಳಿದ್ದಾರೆ.

ಶ್ರೀ ಶಾಂತಮೂರ್ತಿ.—ಮೈಸೂರು ಜಿಲ್ಲೆಯಲ್ಲಿ ತಾಲ್ಲೂಕುಬೋರ್ಡ್‌ಗೆ ಸೇರಿದ್ದ ಆಸ್ಪತ್ರೆಗಳನ್ನು ಸರ್ಕಾರದವರು ತೆಗೆದುಕೊಂಡಿದ್ದಾರೆ. ಆದರೆ ಅನೇಕ ಆಸ್ಪತ್ರೆಗಳಲ್ಲಿ ವೈದ್ಯರಿಲ್ಲ. ತಕ್ಷಣ ಅಲ್ಲಿಗೆ ವೈದ್ಯರನ್ನು ನೇಮಕ ಮಾಡುತ್ತೀರಾ ? ಅದೇ ರೀತಿ ಕೊಳ್ಳೇಗಾಲ ತಾಲೂಕಿನ ಪಾಳ್ಯ ಗ್ರಾಮದ ಆಸ್ಪತ್ರೆಯನ್ನು ತಾಲೂಕು ಬೋರ್ಡ್‌ನವರು ನಡೆಸುತ್ತಿದ್ದುದನ್ನು ಈಗ ಸರ್ಕಾರದವರು ತೆಗೆದುಕೊಂಡಿದ್ದಾರೆ. ಕಳೆದ 2-3 ವರ್ಷದಿಂದ ಅಲ್ಲಿ ವೈದ್ಯರಿಲ್ಲ. ಅಲ್ಲಿಗೂ ಕೂಡ ತಾವು ವೈದ್ಯರನ್ನು ನೇಮಕ ಮಾಡುತ್ತೀರಾ ?

ಶ್ರೀ ಪಿ. ಜಿ. ಆರ್. ಸಿಂಧ್ಯ.—ಕಳೆದ 2-3 ವರ್ಷದಿಂದ ಅಲ್ಲಿ ವೈದ್ಯರ ಹುದ್ದೆ ಏತಕ್ಕೆ ಖಾಲಿ ಇದೆ ಎನ್ನುವ ಬಗ್ಗೆ ನನ್ನ ಹತ್ತಿರ ಉತ್ತರ ಇಲ್ಲ. ಆದರೂ ಆದಷ್ಟು ಬೇಗ ಕ್ರಮ ತೆಗೆದುಕೊಂಡು ಖಾಲಿ ಇರತಕ್ಕ ವೈದ್ಯರ ಹುದ್ದೆಗಳನ್ನು ತುಂಬುವುದಕ್ಕೆ ಪ್ರಯತ್ನ ಮಾಡುತ್ತೇವೆ.

ಶ್ರೀ ಕೆ. ಎಸ್. ಕಾಳಮರಿಗೌಡ.—ಆದಷ್ಟು ಬೇಗ ಎಂದರೆ ಎಷ್ಟು ದಿವಸದಲ್ಲಿ ಭರ್ತಿ ಮಾಡುತ್ತೀರಿ ? ಎಂಬುದನ್ನು ನಿರ್ದಿಷ್ಟವಾಗಿ ಹೇಳಬೇಕು.

ಶ್ರೀ ಪಿ. ಜಿ. ಆರ್. ಸಿಂಧ್ಯ.—ಮಾನ್ಯ ಸದಸ್ಯರಾದ ಶಾಂತಮೂರ್ತಿಯವರೂ ಹೇಳಿದರು, ತಾವೂ ಹೇಳುತ್ತಿದ್ದೀರಿ. ಅಷ್ಟೇ ಅಲ್ಲ ಮಾನ್ಯ ಸದಸ್ಯರಾದ ಕಾಳಮರಿಗೌಡರಿಗೆ ಈ ವಿಷಯದಲ್ಲಿ ಎಷ್ಟು ಕಳಕಳಿ ಇದೆ ಎಂಬುದನ್ನು ನಾನು ಅರ್ಥಮಾಡಿಕೊಂಡಿದ್ದೇನೆ. ಈ ಸಮಸ್ಯೆಯನ್ನು ಹೀಗೇ ಬಿಟ್ಟರೆ ಮುಂದೆ ಕಷ್ಟವಾಗಬಹುದೆಂದು ತಿಳಿದು ಆದಷ್ಟು ಬೇಗ ಕ್ರಮ ತೆಗೆದುಕೊಳ್ಳುತ್ತೇನೆ. ಇದಕ್ಕೆ 2-3 ವರ್ಷ ಏನೂ ಬೇಕಾಗಿಲ್ಲ.

(ಮಾನ್ಯ ಸದಸ್ಯರು ಹಾಜರಿರಲಿಲ್ಲ)

ಚುಕ್ಕೆ ಪ್ರಶ್ನೆ ಸಂಖ್ಯೆ 177. ಶ್ರೀ ವಸಂತ ಬಂಗೇರ(ಬೆಳ್ತಂಗಡಿ).—ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ರಾಜ್ಯ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೇ :—

ಅ) ಬೆಳ್ತಂಗಡಿ ತಾಲ್ಲೂಕಿನಲ್ಲಿ ಮಂಗನ ರೋಗ ಪೀಡಿತ ಬಡ ಕುಟುಂಬದವರಿಗೆ ಪರಿಹಾರ ಧನ ಕೊಡುವ ಸಲಹೆ ಸರ್ಕಾರದಲ್ಲಿದೆಯೇ ;

ಆ) ಈ ರೋಗಕ್ಕೆ ತುತ್ತಾಗಿ ವಾಸಿಯಾಗಿ ಮನೆಗೆ ಹಿಂತಿರುಗಿದ ನಂತರ ಸುಮಾರು 4 ತಿಂಗಳ ಸಮಯ ಯಾವ ಕೂಲಿ ಕೆಲಸವನ್ನು ಮಾಡಲಾಗದ ಬಡ ಕುಟುಂಬಗಳಿಗೆ ಪರಿಹಾರ ನೀಡಲಾಗಿದೆಯೇ ;

ಇ) ಮಂಗನ ರೋಗವನ್ನು ಹತೋಟಿ ತರಲು ಕನಿಷ್ಟ ಹದಿನೈದು ವರ್ಷವಾದರೂ ಬೇಕೆಂಬ ವೈದ್ಯರ ಅಭಿಪ್ರಾಯದಂತೆ ಅಲ್ಲಿ ಶಾಶ್ವತ ವೈದ್ಯರ ತಂಡ ನೇಮಕಾತಿಯನ್ನು ಸರ್ಕಾರದವರು ಯಾವಾಗ ನೇಮಿಸುವರು ;

ಈ) ಈ ತಾಲ್ಲೂಕಿನಲ್ಲಿರುವ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಹಾಗೂ ಇತರ ಸಿಬ್ಬಂದಿಗಳ ಹುದ್ದೆಗಳನ್ನು ಯಾವಾಗ ಭರ್ತಿ ಮಾಡಲಾಗುವುದು ;

ಉ) ಬೆಳ್ತಂಗಡಿಯಲ್ಲಿ ಪ್ರಾಥಮಿಕ ಆರೋಗ್ಯ ಕೇಂದ್ರ ಮಾತ್ರ ಇದ್ದು ತಾಲ್ಲೂಕು ಕೇಂದ್ರವಾದದ್ದು ಇಲ್ಲಿ ಜನರಲ್ ಆಸ್ಪತ್ರೆಯನ್ನು ಮಾಡಲು ಸರ್ಕಾರದವರು ಕೈಗೊಂಡ ಕ್ರಮಗಳೇನು ?

ಶ್ರೀ ಪಿ. ಜಿ. ಆರ್. ಸಿಂಧ್ಯ (ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯ ರಾಜ್ಯ ಸಚಿವರು):

ಅ) ಇಲ್ಲ.